**ಸಾಂಸ್ಥಿಕ ಸಾಲ ಯೋಜನೆ (ಸಾಮಾನ್ಯ  ಹಾಗೂ ಕಟ್ಟಡಗಳ ನಿರ್ಮಾಣಕ್ಕೆ ಸಾಂಸ್ಥಿಕ ಸಾಲ ಯೋಜನೆ)**: ಪ್ರಸ್ತುತ ಯಶಸ್ವಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಘಟಕಗಳಿಗೆ ತುರ್ತು ಅವಶ್ಯಕತೆಗೆ ದುಡಿಮೆ ಬಂಡವಾಳವನ್ನು ಒದಗಿಸಲು ಅಥವಾ ಹೆಚ್ಚಾಗಿರುವ ಮಾರುಕಟ್ಟೆಯ ಬೇಡಿಕೆಗೆ ಉತ್ಪನ್ನವನ್ನು ಒದಗಿಸಲು ಬೇಕಾಗುವ ಹಣವನ್ನು ಅಲ್ಪಾವಧಿ ಸಾಲದ ರೂಪದಲ್ಲಿ ಸಾಂಸ್ಥಿಕ ಸಾಲ ಯೋಜನೆಯಡಿ ಒದಗಿಸಲಾಗುವುದು.  ಹಣಕಾಸು ಸಂಸ್ಥೆಗಳಿಂದ ಅವಧಿ ಸಾಲವು ಮಂಜೂರಾಗಿ ಹಣ ಬಿಡುಗಡೆಯಾಗುವವರೆಗೆ ಘಟಕಗಳಿಗೆ ಮಾರುಕಟ್ಟೆಯ ಅಭಿವೃದ್ಧಿ, ಮಾರುಕಟ್ಟೆಯ ವಿಸ್ತರಣೆ ಅಥವಾ ಹೊಸ ಯಂತ್ರಗಳನ್ನು ಖರೀದಿಸಲು ತುರ್ತು ಅಗತ್ಯಗಳನ್ನು ಪೂರೈಸಲು ಲೆಟರ್ ಆಫ್ ಕ್ರೆಡಿಟ್ ತೆರೆಯಲು, ಸರ್ಕಾರಕ್ಕೆ ಪಾವತಿಸಬೇಕಾದ ಶಾಸನಬದ್ಧ ಬಾಕಿಗಳಾದ ಆದಾಯ ತೆರಿಗೆ, ಮಾರಾಟ ತೆರಿಗೆ, ಅಬಕಾರಿ ಶುಲ್ಕ ಇತ್ಯಾದಿಗಳನ್ನು ಭರಿಸಲು ಈಗಾಗಲೇ ಅಸ್ಥಿತ್ವದಲ್ಲಿರುವ ಯಶಸ್ವಿ ಘಟಕಗಳಿಗೆ ಕಡಿಮೆ ಅವಧಿ ಸಾಲವನ್ನು ನೀಡಲಾಗುವುದು. ಆಸ್ತಿ ಅಭಿವೃದ್ಧಿಗಾರರು, ನಿರ್ಮಾಣ ಸಂಸ್ಥೆಗಳು ಹಾಗೂ ಪಾಲುದಾರಿಕೆ ಘಟಕಗಳಿಗೆ ಸಮೂಹ ಗೃಹ ನಿರ್ಮಾಣಕ್ಕೆ, ವಾಣಿಜ್ಯ ಮಳಿಗೆ, ಸಾಫ್ಟ್‌ವೇರ್ ಪಾರ್ಕ್‌ಗಳು, ಬ್ರಿಡ್ಜ್‌ಗಳು,ರಸ್ತೆಗಳು, ಫ್ಲೈಓವರ್, ಇತ್ಯಾದಿ ಮೂಲ ಸೌಕರ್ಯ ಪ್ರಾಜೆಕ್ಟುಗಳ ನಿರ್ಮಾಣಕ್ಕೆ ಸಾಂಸ್ಥಿಕ ಸಾಲ ನೀಡಲಾಗುವುದು.